**11-06-2024**

## ಮಧ್ಯಂತರ ಅರ್ಜಿ 1 ರ ಮೇಲೆ ಅಂತರಿಕ ಆದೇಶ

ಮೇಲ್ಮನವಿದಾರರ ಪರವಾಗಿ ದಿವಾಣಿ ಪ್ರಕ್ರಿಯೇ ಸಂಹಿತೆ ಕ್ರಮಾದೇಶ 43 ನಿಯಮ 1 ರಡಿ ಸದರಿ ಸಂಕೀರ್ಣ ಮೇಲ್ಮನವಿಯನ್ನು ಸಲ್ಲಿಸಿ ದೊಡ್ಡಬಳ್ಳಾಪುರದ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಓ.ಎಸ್.ನಂ.54/2022 ರಲ್ಲಿ ದಿನಾಂಕಃ 14-03-2024 ರಂದು ಮಧ್ಯಂತರ ಅರ್ಜಿ-1 ರಲ್ಲಿ ನೀಡಿದ ಆದೇಶವನ್ನು ರದ್ದುಪಡಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ಸದರಿ ಸಂಕೀರ್ಣ ಮೇಲ್ಮನವಿಯೊಂದಿಗೆ ಮಧ್ಯಂತರ ಅರ್ಜಿ-1 ನ್ನು ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 41 ನಿಯಮ 5 ರ ಜೊತೆ ಕಲಂ.151 ರಡಿ ಸಲ್ಲಿಸಿ ದೊಡ್ಡಬಳ್ಳಾಪುರದ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು / ವಿಚಾರಣಾ ನ್ಯಾಯಾಲಯವು ಓ.ಎಸ್.ನಂ. 54/2022 ರಲ್ಲಿ ದಿನಾಂಕಃ 14-03-2024 ರಂದು ನೀಡಿದ ಆದೇಶಕ್ಕೆ ಸದರಿ ಮೇಲ್ಮನವಿಯ ಅಂತಿಮ ನಿರ್ಣಯದವರೆಗೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಮೇಲ್ಮನವಿದಾರರ ವಕೀಲರ ವಾದವನ್ನು ಆಲಿಸಲಾಯಿತು.

4. ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಸದರಿ ವಾದಿ / ಎದುರುದಾರರು ದೊಡ್ಡಬಳ್ಳಾಪುರದ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿದಾರರು / ಪ್ರತಿವಾದಿಯರ ವಿರುದ್ಧ ದಾವಾಸ್ತಿಗಳಲ್ಲಿ ತಮ್ಮ ತಲಾ 1/4 ನೇ ಹಿಸ್ಸೆಯನ್ನು ಕೋರಿ ಓ.ಎಸ್.ಸಂಖ್ಯೆ.54/2022 ರ ದಾವೆಯನ್ನು ಸಲ್ಲಿಸಿದ್ದರು.

6. ಸದರಿ ದಾವೆಯೊಂದಿಗೆ ಮಧ್ಯಂತರ ಅರ್ಜಿ-1 ನ್ನು ಸಲ್ಲಿಸಿ ದಾವಾಸ್ತಿಯಲ್ಲಿನ ತಮ್ಮ ಹಿಸ್ಸೆಯ ಸ್ವಾಧೀನ ವನ್ನು ನೀಡುವವರೆಗೆ ಮತ್ತು ದಾವೆಯ ಅಂತಿಮ ನಿರ್ಣಯದವರೆಗೆ ದಾವಾಸ್ತಿಯನ್ನು ಮಾರಾಟ ಮಾಡದಂತೆ ಪ್ರತಿವಾದಿಯರನ್ನು ನಿರ್ಬಂಧಿಸಬೇಕೆಂದು ಕೋರಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ವಿಚಾರಣಾ ನ್ಯಾಯಾಲಯವು ಪುರಸ್ಕರಿಸಿ ದಾವೆಯ ಅಂತಿಮ ಆದೇಶದವರೆಗೆ ದಾವಾಸ್ತಿಯನ್ನು ಮಾರಾಟ ಮಾಡದಂತೆ ಆದೇಶಿಸಿದ್ದರಿಂದ ಅರ್ಜಿಯ ಲ್ಲಿ ಮತ್ತು ಅರ್ಜಿಯ ಲಗತ್ತು ಪ್ರಮಾಣಪತ್ರದಲ್ಲಿ ತಿಳಿಸಿದ ಕಾರಣಗಳ ಮೇರೆಗೆ ವಿಚಾರಣಾ ನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

7. ಸದರಿ ಮೇಲ್ಮನವಿದಾರರ ವಕೀಲರು ವಾದ ಮಂಡಿಸಿ ದಾವಾಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಸದರಿ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು ಮತ್ತು ಹಿಸ್ಸೆ ಇರುವುದಿಲ್ಲವೆಂದು, ವಿಚಾರಣಾ ನ್ಯಾಯಾಲಯವು ನೀಡಿದ ಆದೇಶದಿಂದ ಸಾಲ ಪಡೆದು ದಾವಾಸ್ತಿಯನ್ನು ಅಭಿವೃದ್ಧಿಪಡಿಸಲು ಪ್ರತಿವಾದಿಯರಿಗೆ ತೊಂದರೆಯಾಗಿರುತ್ತದೆಂದು, ಅಲ್ಲದೇ ತಮ್ಮ ಹಕ್ಕಿಗೆ ಒಳಪಟ್ಟ ಆಸ್ತಿಯನ್ನು ಸ್ವತಂತ್ರವಾಗಿ ಮತ್ತು ನಿರ್ಭಯವಾಗಿ ಅನುವಭವಿಸಲು ಪ್ರತಿವಾದಿಯರಿಗೆ ತೊಂದರೆಯಾಗಿರುತ್ತದೆಂದು, ಆದ್ದರಿಂದ ವಿಚಾರಣಾ ನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ವಾದ ಮಂಡಿಸಿರುತ್ತಾರೆ.

8. ಸದರಿ ದಾವಾಸ್ತಿಗಳು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆಯೇ ಅಥವಾ ವಾದಿಯರು ಹೇಳಿದಂತೆ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆಯೇ ಮತ್ತು ಸದರಿ ದಾವಾಸ್ತಿಗಳಲ್ಲಿ ವಾದಿಯರು ಹಕ್ಕನ್ನು ಮತ್ತು ಹಿಸ್ಸೆಯನ್ನು ಹೊಂದಿರುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಉಭಯಪಕ್ಷಗಾರರ ವಿಚಾರಣೆಯ ನಂತರ ಅರ್ಹತೆಯ ಆಧಾರದಲ್ಲಿ ನಿರ್ಣಯಿಸಬೇಕಾಗಿರುತ್ತದೆ.

9. ಸದರಿ ವಿವಾದಿತ ಅಂಶವನ್ನು ವಿಚಾರಣೆಯ ಮೂಲಕ ನಿರ್ಣಯಿಸಲು ಸುದೀರ್ಘ ಕಾಲಾವಕಾಶ ಬೇಕಾಗಿರುತ್ತದೆ. ಒಂದು ವೇಳೆ ದಾವಾಸ್ತಿಗಳಲ್ಲಿ ವಾದಿಯರು ಹಕ್ಕನ್ನು ಹೊಂದಿ ಹಿಸ್ಸೆಯನ್ನು ಪಡೆಯಲು ಅರ್ಹರಾಗಿದ್ದಲ್ಲಿ ಸದರಿ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದಲ್ಲಿ ವಾದಿಯರಿಗೆ ಹಾನಿ ಹಾಗೂ ನಷ್ಟವುಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅಂತಿಮ ನಿರ್ಣಯದವರೆಗೆ ಪ್ರತಿವಾದಿಯರನ್ನು ನಿರ್ಬಂಧಿಸದಿದ್ದಲ್ಲಿ ಪ್ರತಿವಾದಿಯರಿಗೆ ಆಗುವ ನಷ್ಟಕ್ಕಿಂತ ವಾದಿಯರಿಗೆ ಆಗುವ ನಷ್ಟವೇ ಹೆಚ್ಚಿನಾಗಿರುತ್ತದೆ.

10. ಆದ್ದರಿಂದ ವಿಚಾರಣಾ ನ್ಯಾಯಾಲಯವು ನೀಡಿದ ಆದೇಶವು ತಾತ್ಕಾಲಿಕವಾಗಿದ್ದು ಸೂಕ್ತ ಹಾಗೂ ನ್ಯಾಯೋಚಿತವಾಗಿರುತ್ತದೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಸದರಿ ಆದೇಶವು ಕೇವಲ ದಾವಾ ಸ್ತಿಯನ್ನು ಮಾರಾಟ ಮಾಡದಂತೆ ನಿರ್ಬಂಧಿಸಿರುವುದರಿಂದ ಪ್ರತಿವಾದಿಯರ ಸ್ವಾಧೀನಕ್ಕಾಗಲೀ ಅಥವಾ ಅಭಿವೃದ್ಧಿಪಡಿಸುವುದಕ್ಕಾಗಲೀ ಯಾವುದೇ ತೊಂದರೆ ಇರುವುದಿಲ್ಲ. ಅಲ್ಲದೇ ಸದರಿ ಅದೇಶ ವು ಮಧ್ಯಂತರ ಮತ್ತು ದಾವೆಯ ನಿರ್ಣಯದವರೆಗೆ ನಿಯಮಿತ ಆದೇಶವಾಗಿ ರುತ್ತದೆಯೇ ವಿನಃ ಅಂತಿಮ ತೀರ್ಪು ಅಥವಾ ಆದೇಶವಾಗಿರುವುದಿಲ್ಲ. ಆದ್ದರಿಂದ ಸದರಿ ವಿಚಾರಣಾ ನ್ಯಾಯಾಲಯದ ಅದೇಶಕ್ಕೆ ತಡೆಯಾಜ್ಞೆ ನೀಡಲು ಯಾವುದೇ ಸಮರ್ಥನೀಯವಾದ ಕಾರಣ ಗಳಿರುವುದಿಲ್ಲ. ಒಂದು ವೇಳೆ ತಡೆಯಾಜ್ಞೆ ತೆರವುಗೊಳಿಸಿದ್ದಲ್ಲಿ ಪ್ರತಿವಾದಿಯರು ದಾವಾಸ್ತಿಯನ್ನು ಮಾರಾಟ ಮಾಡಿದ್ದಲ್ಲಿ ಖರೀದಿದಾರರ ವಿರುದ್ಧ ದಾವೆಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸದರಿ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡಂತೆ –

**ಆ ದೇ ಶ**

ಸದರಿ ಸಂಕೀರ್ಣ ಅರ್ಜಿಯ ಮತ್ತು ಮಧ್ಯಂತರ ಅರ್ಜಿ-1 ರ ತುರ್ತು ನೋಟೀಸನ್ನು ಪ್ರತಿವಾದಿಯರು / ಎದುರುದಾರರಿಗೆ ಕಳುಹಿಸಲು ಆದೇಶಿಸಲಾಗಿದೆ.

ಹಾಜರಾತಿಗಾಗಿ ದಿನಾಂಕಃ **02-07-2024** ರಂದು ಕರೆಯಲು ಆದೇಶಿಸಲಾಗಿದೆ.

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.**